# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## MVC No. 1012/2024

**ಸಾಕ್ಷಿಯನ್ನು ದಿಃ 05.06.2026 ದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಅರ್ಜಿದಾರರ ಪರ ಪರ ಶ್ರೀ V.V ವಕೀಲರಿಂದಃ-

ಅರ್ಜಿದಾರರು ಏನು ಅರ್ಜಿ ಸಲ್ಲಿಸಿದ್ದಾರೆ ಮತ್ತು ಯಾವ ದಾಖಲೆ ಹಾಜರುಪಡಿಸಿದ್ದಾರೆ ಎಂದು ತಿಳಿದುಕೂಂಡಿದ್ದೇನೆ. KA-45-Y-8744ರ ವಾಹನಕ್ಕೆ ಅಪಘಾತದ ಸಮಯದಲ್ಲಿ ನಮ್ಮ ಕಂಪನಿಯಿಂದ ವಿತರಿಸಿದ ವಿಮಾ ಪಾಲಿಸಿ ಚಾಲ್ತಿಯಲ್ಲಿತ್ತು ಎಂದರೆ ಸರಿ. 1ನೇ ಎದುರುದಾರರು ಅರ್ಜಿದಾರರ ತಪ್ಪಿನಿಂದ ಅಪಘಾತವಾಗಿದೆ ಎಂದು ದೂರು ಕೊಟ್ಟು ದೋಷಾರೋಪಣ ಪತ್ರ ಸಲ್ಲಿಸಲಾಗಿದೆ ಎಂದರೆ ಇಲ್ಲ. ಸಾಕ್ಷಿ ಮುಂದುವರಿದು ಅರ್ಜಿದಾರರಿಗೆ ಅನುಕೂಲವಾಗುವಂತೆ ಪೋಲಿಸರು ಅಂತಿಮ ವರದಿ ಸಲ್ಲಿಸಿದ್ದಾರೆ. 1ನೇ ಎದುರುದಾರರು ಕೆ.ಆರ್.ನಗರ ನ್ಯಾಯಾಲಯದಲ್ಲಿ ಹಾಜರಾಗಿ ತನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ಒಪ್ಪಿಕೊಂಡು ದಂಡ ಪಾವತಿಸಿದ್ದಾನೆ ಎಂದರೆ ಗೊತ್ತಿಲ್ಲ. ಅರ್ಜಿದಾರರು ಈ ಅರ್ಜಿಯನ್ನು ತಾನು ಚಲಾಯಿಸುತ್ತಿದ್ದ ವಾಹನದ ವಿಮಾ ಕಂಪನಿಯ ಮೇಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಅರ್ಜಿದಾರರ ವಾಹನದ ವಿಮಾ ಕಂಪನಿಯನ್ನು ಪಕ್ಷಗಾರರನ್ನಾಗಿ ಮಾಡುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಎರಡು ವಾಹನಗಳ ಮಧ್ಯೆ ಅಪಘಾತವಾಗಿರುವ ಕಾರಣ ಪಕ್ಷಗಾರರನ್ನಾಗಿ ಮಾಡಬೇಕಾಗಿತ್ತು ಎಂದು ನುಡಿಯುತ್ತಾರೆ. ಪರಸ್ಪರ ನಿರ್ಲಕ್ಷ್ಯತನದಿಂದ ಅಪಘಾತವಾಗಿದ್ದಲ್ಲಿ ಪೋಲಿಸರು ಅರ್ಜಿದಾರರ ವಿರುದ್ದವು ಕೂಡ ಅಂತಿಮ ವರದಿ ಸಲ್ಲಿಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅಪಘಾತದ ಸಮಯದಲ್ಲಿ ಅರ್ಜಿದಾರರ ಬಳಿ ಡಿ.ಎಲ್ ಇಲ್ಲ ಎಂದು ಗೊತ್ತಿದ್ದರೂ ಸಹ ಪೋಲಿಸರು 1ನೇ ಎದುರುದಾರರ ವಿರುದ್ದ ದೋಷಾರೋಪಣ ಪತ್ರ ಸಲ್ಲಿಸಿದ್ದಾರೆ. 1ನೇ ಎದುರುದಾರರ ವಿರುದ್ದ ಸಲ್ಲಿಸಿದ್ದ ಅಂತಿಮ ವರದಿ ಸರಿಯಿಲ್ಲ, ಅರ್ಜಿದಾರರ ವಿರುದ್ದವು ಕೂಡ ಅಂತಿಮ ವರದಿ ಸಲ್ಲಿಸಬೇಕಾಗಿತ್ತು ಎಂದು ನೀವಾಗಲಿ 1ನೇ ಎದುರುದಾರರಾಗಲೀ ಕ್ರಮ ಕೈಗೂಂಡಿದ್ದಿರಾ ಎಂದರೆ ಇಲ್ಲ. ಸಾಕ್ಷಿ ಮುಂದುವರಿದು ಕ್ರಿಮಿನಲ್ ಪ್ರಕರಣದಲ್ಲಿ ನಾವು ಪಕ್ಷಗಾರರಲ್ಲ ಎಂದು ನುಡಿಯುತ್ತಾರೆ.

1ನೇ ಎದುರುದಾರರ ಬಳಿ ಚಾಲನಾ ಪರವಾನಿಗೆ ಇದೆ. ಅರ್ಜಿದಾರರಿಗೆ ಅಪಘಾತದಿಂದಾಗಿ ತೀವ್ರ ಸ್ವರೂಪದ ಗಾಯವಾಗಿ ಚಿಕಿತ್ಸೆ ಪಡೆದಿದ್ದು ಅವರಿಗೆ ಪರಿಹಾರ ನೀಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.